ಶ್ರೀ ಸಿದ್ದರಾಮಯ್ಯ.— ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಈ ಬಗ್ಗೆ ಉತ್ತರವನ್ನು ತರಿಸಿಕೊಡ ಲಾಗುವುದು.

೭ ಶಿವಮೊಗ್ಗ ಜಿಲ್ಲೆಯಂ ತುಂಗ ಏತ ನೀರಾವರಿಯ ಕಾರ್ಯವನ್ನು ಬೇಗ ಮುಗಿಸಲು ಒತ್ತಾಯ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ಏತ ನೀರಾವರಿಗಾಗಿ ಹಲವಾರು ವರ್ಷಗಳಿಂದ ಜನರು ಚಳುವಳಿ, ಹೋರಾಟ ಮಾಡುತ್ತಿದ್ದುದನ್ನು ಗಮನದಲ್ಲಿಟ್ಟು ಶಾಸಕರಾದ ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರು ಮತ್ತು ನಾನು ಈ ಹಿಂದೆ ವಿಧಾನ ಸಭೆಯಲ್ಲಿ ಹಲವಾರು ನಿಯಮಗಳ ಮೂಲಕ ಪ್ರಸ್ತಾಪಿಸಿದಾಗ ೭೫–೭೬, ೭೬–೭೭ನೇ ಸಾಲಿನ ಬಜೆಟ್ ನಲ್ಲಿ ತುಂಗಾ ಏತ ನೀರಾವರಿಯನ್ನು ಸೇರಿಸಲಾಗಿತ್ತು. ಈ ಸಂದರ್ಭದಲ್ಲಿ ರೈತರು ಶೇ. ೧೫ ರಂತೆ ಮುಂಗಡ ಹಣ ಕಟ್ಟಬೇಕೆಂದು ಫಲಾನುಭವಿಗಳಿಗೆ ನೋಟೀಸು ಕೊಡಲಾಗಿತ್ತು. ಆಲ್ಲದೆ, ರೈತರು ಶೇ ೧೫ ರಷ್ಟು ಮುಂಗಡ ಹಣವನ್ನು ಕಟ್ಟಬೇಕಾಗಿಲ್ಲ ಎಂದು ತದನಂತರ ತಿಳಿಸಲಾಗಿತ್ತು. ಆದರೆ ಯಾವುದೇ ರೀತಿಯ ಕಾಮಗಾರಿಯನ್ನೂ ಇದುವರೆಗೂ ಪ್ರಾರಂಭಿಸಿಲ್ಲ. ಸದರಿ ತುಂಗಾ ಏತ ನೀರಾವರಿಯ ಕಾಮಗಾರಿಯನ್ನು ಯಾರು ಯಾವಾಗ ಪ್ರಾರಂಭಿಸಿ, ಯಾವಾಗ ಮುಗಿಸುತ್ತಾ ರೆಂಬುದನ್ನು ತಿಳಿಸಬೇಕೆಂದು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ಇದಕ್ಕೆ ನಾನು ಉತ್ತರ ವನ್ನು ತರಿಸಿಕೊಡುತ್ತೇನೆ.

೮. ಬೆಂಗಳೂರಿನಲ್ಲಿ ಆಟೋರಿಕ್ಷಾ ದರಗಳನ್ನು ಪರಿಷ್ಕರಿಸಲಂ ಒತ್ತಾಯಂ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ೧೫,೦೦೦ ಆಟೋರಿಕ್ಷಾಗಳಿದ್ದು ಆಟೋರಿಕ್ಷಾ ಡ್ರೈವರ್‌ಗಳು ಮಿನಿಮಂ ಕಿಲೋಮೀಟರ್‌ಗೆ ಕಡಿಮೆ ದರವಿದೆ, ಇದನ್ನು ಪರಿಷ್ಕರಿಸಬೇಕೆಂದು ಮನವಿ ಪತ್ರ ಕೊಡಿದ್ದಾರೆ.

ಮಾನ್ಯ ಸಾರಿಗೆ ಮಂತ್ರಿಗಳು ಇದನ್ನು ಪರಿಷ್ಕರಿಸುವುದಾಗಿ ಆಶ್ವಾಸನೆಯನ್ನು ಈಗ್ಗೆ ೬ ತಿಂಗಳ ಹಿಂದೆ ಕೊಟ್ಟಿದ್ದರೂ ಆ ಆಶ್ವಾಸನೆಯನ್ನು ಈಡೇರಿಸಿರುವುದಿಲ್ಲ. ಈ ದರವನ್ನು ಪುನರ್‌ವಿಮರ್ಶಿಸಿ ವುದು ಸಮಂಜಸವಾಗಿದೆ.

ಈ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳ ಹೇಳಿಕೆಯನ್ನು ಕೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ. ಬೆಂಗಳೂರಿನಲ್ಲಿ ದಿನಾಂಕ ೨೦–೩–೧೯೮೪ ಆಟೋರಿಕ್ಷಾಗಳ ದರ ಪರಿಷ್ಕರಣ ಮಾಡಬೇಕೆಂದು ಆಟೋರಿಕ್ಷಾಗಳ ಚಾಲಕರು ಮುಷ್ಕರ ನಡೆಸುತ್ತಿರುವುದು ನಿಜ.

ಕಳೆದಸಾರಿ ಪೆಟ್ರೋಲ್ ದರ ಹೆಚ್ಚಿದಾಗ ಆದನ್ನು ಗಮನದಲ್ಲಿಟ್ಟುಕೊಂಡು ಆಟೋರಿಕ್ಷಾಗಳ ದರವನ್ನು ಪೆಟ್ರೋಲ್ ದರದಲ್ಲಿನ ಹೆಚ್ಚಳದ ಪ್ರಮಾಣಕ್ಕನುಗುಣವಾಗಿ ನೀಡಿದ್ದು ಅದು ಈಗಾಗಲೇ ಜಾರಿಯಲ್ಲಿರುತ್ತದೆ. ಆಟೋರಿಕ್ಷಾಗಳ ಮಾಲೀಕರ ಚಾಲಕರ ದರ ಪರಿಷ್ಕರಣೆ ಬಗ್ಗೆ ಬಂದಿದ್ದ ಮನವಿ ಗಳನ್ನು ಪರಿಗಣಿಸಿ ಸಾರ್ವಜನಿಕರಿಂದ ಆಹವಾಲುಗಳನ್ನು ಆಹ್ವಾನಿಸಿ ಕರ್ನಾಟಕ ರಾಜ್ಯಪತ್ರದಲ್ಲಿ ತಾ. ೩೦–೭–೧೯೮೫ ರಂದು ಪ್ರಕಟಿಸಲಾಗಿತ್ತು. ಸಾರ್ವಜನಿಕರಿಂದ ಬಂದ ಆಹವಾಲುಗಳನ್ನು ಪರಿಶೀಲಿಸಿ ತಾ. ೨೯–೧೨–೧೯೮೯ ರಂದು ಸರ್ಕಾರವು ಸಾರ್ವಜನಿಕರ, ಬಳಕೆದಾರರ ವೇದಿಕೆಗಳ, ಆಟೋರಿಕ್ಷಾ ಮಾಲೀಕರ ಚಾಲಕರ, ಆಟೋರಿಕ್ಷಾ ಸಂಘ-ಸಂಸ್ಥೆಗಳ ಅಹವಾಲುಗಳನ್ನು ಕೇಳಿದೆ.

ನೆರೆರಾಜ್ಯಗಳಲ್ಲಿ ಜಾರಿಯಲ್ಲಿರುವ ಆಟೋರಿಕ್ಷಾಗಳ ದರಗಳ ವಿವರಗಳನ್ನೂ ಸಹ ತರಿಸಿಕೊಂಡು ಸಾರ್ವಜನಿಕರ, ಆಟೋರಿಕ್ಷಾಗಳ ಚಾಲಕರ/ಮಾಲೀಕರ ಹಿತರಕ್ಷಣೆಯನ್ನು ಗಮನದಲ್ಲಿ ಇರಿಸಿಕೊಂಡು ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಘಟ್ಟದಲ್ಲಿದೆ. ಮೋಟಾರು ವಾಹನ ಕಾಯಿದೆಯ ವಿಧಿಗಳನ್ನು ಅನುಸರಿಸಬೇಕಾಗಿರುವುದರಿಂದ, ಅವುಗಳನ್ನು ಅನುಸರಿಸಿ ಹೊಸ ಪುಷ್ಕೃತ ದರಗಳನ್ನು ತಾ ೧–೪–೧೯೮೯ ರಿಂದ ಜಾರಿಗೆ ತರಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳ ಲಾಗುತ್ತಿದೆ.